# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 246 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 15.02.2023 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿನ ಆರ್.ಆರ್.ಟಿ. ಶಾಖೆಯಲ್ಲಿ ಎಷ್ಟು ಅರ್ಜಿಗಳು ಬಾಕಿ ಇವೆ; | ರಾಜ್ಯದಲ್ಲಿನ ಆರ್.ಆರ್.ಟಿ. ಶಾಖೆಗಳಲ್ಲಿ ಒಟ್ಟು 68,302 ಅರ್ಜಿಗಳು ಬಾಕಿ ಇರುತ್ತವೆ. |
| ಆ. | ಆರ್.ಆರ್.ಟಿ. ಶಾಖೆಯಲ್ಲಿ ಅರ್ಜಿಗಳ ವಿಲೇವಾರಿ ತುಂಬಾ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಸರ್ಕಾರದ ಆದೇಶ ಸಂಖ್ಯೆ:ಕಂಇ 25 ಎಂಆರ್ಆರ್ 2023, ದಿನಾಂಕ:31.01.2023ರಲ್ಲಿ ರಾಜ್ಯಾದ್ಯಂತ ಎಲ್ಲಾ ತಾಲ್ಲೂಕುಗಳ ಗ್ರಾಮ ಆಡಳಿತಾಧಿಕಾರಿಗಳ ವೃತ್ತ ಮಟ್ಟದಲ್ಲಿ ಕಂದಾಯ ಅದಾಲತ್‌ಗಳನ್ನು ನಡೆಸಿ ಪಹಣಿಗಳ ಲೋಪದೋಷಗಳನ್ನು ಸರಿಪಡಿಸುವ ಕಾರ್ಯಕ್ರಮವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಸಲುವಾಗಿ ಪಹಣಿ ತಿದ್ದುಪಡಿ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ. ಅದರಂತೆ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. |
| ಇ. | ಇದರಿಂದಾಗಿ ರೈತರಿಗೆ ತುಂಬಾ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಈ. | ಸದರಿ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | |
| ಉ. | ರಾಜ್ಯದಲ್ಲಿ ಪೋಡಿ ಸಂಬಂಧ ಬಂದಿರುವ ಅರ್ಜಿಗಳು, ವಿಲೇವಾರಿಯಾದ ಅರ್ಜಿಗಳು ಹಾಗೂ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ವಿಳಂಬಕ್ಕೆ ಕಾರಣಗಳೇನು; | ರಾಜ್ಯದಲ್ಲಿ ಪ್ರಸ್ತುತ 2022-23ನೇ ಸಾಲಿನಲ್ಲಿ ಪೋಡಿ ಸಂಬಂಧ ಸ್ವೀಕೃತವಾದ, ವಿಲೇವಾರಿಯಾದ ಮತ್ತು ಬಾಕಿ ಇರುವ ಅರ್ಜಿಗಳ ವಿವರಗಳು ಕೆಳಕಂಡಂತಿವೆ: (table below) |

| ಪ್ರಾ. ಶೀಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ | ಕಂದಾಯ ಶಾಖೆ ಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ |
|---|---|---|---|---|---|---|
| 115903 | 108695 | 224598 | 120446 | 104152 | 56140 | 48012 |

ಈ ಕೆಳಕಂಡ ಕಾರಣಗಳಿಂದಾಗಿ ಪೋಡಿ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿದೆ:-

1) ಆಕಾರ ಬಂದು & ಪಹಣಿ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು.
2) ಪಹಣಿ ಕಾಲಂ 3 & 9 ರಲ್ಲಿ ವಿಸ್ತೀರ್ಣದ ವ್ಯತ್ಯಾಸಗಳಿರುವುದು.
3) ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರೆ) ಲಭ್ಯವಾಗದಿರುವುದು.
4) ಭೂಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ಸೂಚನೆಗಳ ನ್ವಯ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆ ಲಭ್ಯ ವಾಗದೇ ಇರುವುದು.
5) ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿ ಮತ್ತು ಅನುಭವ ವಿಸ್ತೀರ್ಣ ಗಳಲ್ಲಿ ವ್ಯತ್ಯಾಸ ಇರುವುದು. ಮತ್ತು ಜಮೀನಿನ ಆಕಾರ ಬಂದಿನ ವಿಸ್ತೀರ್ಣ ಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವು ದರಿಂದ ಪಹಣಿ ಸರಿಪಡಿಸುವಲ್ಲಿ ತೊಂದರೆ ಇರುವುದು ಇತ್ಯಾದಿ
6) ಜಮೀನಿನ ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲ ವಾಗಿದ್ದು. ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗು ವುದು
7) ಅಳತೆ ವೇಳೆ ಜಮೀನಿನ ಹಕ್ಕು & ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವಿವಾದಗಳಿರುವುದು.
8) ಸರ್ಕಾರಿ/ಪರವಾನಗಿ ಭೂಮಾಪಕರಿಗೆ ಪ್ರತಿ ಮಾಹೆ ನಿಗಧಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗುತ್ತಿರುವುದು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಊ. | ತುರ್ತಾಗಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬಾಕಿಯಿರುವ ಪೋಡಿ ಅರ್ಜಿಗಳ ತ್ವರಿತ ವಿಲೇವಾರಿಗಾಗಿ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ:-<br>1) ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದ್ದು, ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸಲಾಗಿದೆ. ಸರದಿ ಸಾಲಿನಂತೆ ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್ ಲೈನ್ ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರು ಕಡತಗಳನ್ನು ಹಂಚಿಕೆಯಾದ ಸರದಿ ಸಾಲಿನಂತೆ ಆನ್ ಲೈನ್ ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶ ವಿಲ್ಲದಂತೆ ಕ್ರಮ ವಹಿಸ ಲಾಗುತ್ತಿದೆ.<br>2) ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>3) ಸರ್ಕಾರದ ಸೂಚನೆಯನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡ ಲಾಗಿದೆ.<br>4) ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗ ದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗು ತ್ತಿದೆ.<br>5) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>6) ಸರ್ಕಾರದ ಸೂಚನೆಯಂತೆ 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಸನ್ 2019 ರಲ್ಲಿ ಅರ್ಜಿಗಳನ್ನು ಆಹ್ವಾನಿಸಿ, ಪ್ರವೇಶ ಪರೀಕ್ಷೆ ನಡೆಸಿ, ಜಿಲ್ಲಾ ವಾರು ಅರ್ಹ ಅಭ್ಯರ್ಥಿ ಗಳನ್ನು ಆಯ್ಕೆ ಮಾಡಿ ತರಬೇತಿ ನಂತರ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಲಾಗಿದ್ದು, ಕಾರ್ಯ ನಿರ್ವಹಿಸುತ್ತಿದ್ದಾರೆ.<br>7) ಅಗತ್ಯತೆ ಮೇರೆಗೆ ಹೆಚ್ಚಿನ 3000 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಭೂಮಾಪನ ಇಲಾಖೆ ವತಿಯಿಂದ ಅರ್ಜಿಗಳನ್ನು ಆಹ್ವಾನಿಸಿ, ಪ್ರವೇಶ ಪರೀಕ್ಷೆ ನಡೆಸಿ ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, 2 ತಂಡಗಳಲ್ಲಿ ತರಬೇತಿ ನಂತರ ಅಂತಿಮ ಪರೀಕ್ಷೆ ನಡೆಸಿ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಲಾಗಿದೆ. ಮತ್ತು ತರಬೇತಿಯಲ್ಲಿ ಅನುತ್ತೀರ್ಣರಾದವರಿಗೆ 15 ದಿನಗಳ ಪುನ್ಚೇತನ ತರಬೇತಿ ನಿಡಲಾಗುತ್ತಿದೆ ಹಾಗೂ 3ನೇ ತಂಡಕ್ಕೆ ತರಬೇತಿ ನಿಡಲಾಗುತ್ತಿದ್ದು ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುವುದು. |

ಸಂಖ್ಯೆ:ಕಂಇ 63 ಟಿಆರ್‌ಎಂ 2023

(ಆರ್. ಅಶೋಕ)
ಕಂದಾಯ ಸಚಿವರು